2015 ಕ.ತೀ.ವ 148

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ

## ಶ್ರೀ ಸೈಯದ್ ಅಮೀನ್ ಆಲಿ –ವಿರುದ್ಧ– ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ ಇವರಿಂದ ಪ್ರತಿನಿಧಿತ ಮತ್ತು ಮತ್ತೊಬ್ಬರು*

ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.

ಅರ್ಜಿದಾರರು ಕರ್ನಾಟಕ ನ್ಯಾಯಿಕ ಸೇವೆಯ ಸದಸ್ಯರಾಗಿದ್ದು ಅವರ ವಿರುದ್ಧ ಶಿಸ್ತುಕ್ರಮ ಜರುಗಿಸಿ ತಪ್ಪಿತಸ್ಥರೆಂದು ಶಿಕ್ಷಿಸಲಾಗುತ್ತದೆ. ಆದರೆ ಅರ್ಜಿದಾರರು ನಿವೃತ್ತರಾದ್ದರಿಂದ ಶಿಕ್ಷೆಯನ್ನು ಜಾರಿಗೊಳಿಸಲಾಗಿದೆ. ಅದಕ್ಕೆ ಬದಲಾಗಿ ಶಿಕ್ಷೆಯನ್ನು ಮಾರ್ಪಡಿಸಿ ಶಿಕ್ಷೆಯ ಅವಧಿಯನ್ನು ಅಮಾನತ್ತಿನಲ್ಲಿ ಇರಿಸಿದಂತೆ ಪರಿಗಣಿಸಿರುವಂತೆ ಹಾಗೂ ಆ ಅವಧಿಗೆ ಅರ್ಜಿದಾರರು ನಿರ್ವಹಣಾ ವೆಚ್ಚಕ್ಕೆ ಅರ್ಹರೆಂದು ನೀಡಿದ ಸೂಚನಾ ಪತ್ರವನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿ.

ರಿಟ್ ಅರ್ಜಿದಾರರು ಎದುರುದಾರರು ತಮ್ಮ ಮೇಲೆ ಹೊರಿಸಿದ ನಾಲ್ಕನೇ ದೋಷಾರೋಪದ ಎರಡನೇ ಭಾಗದ ಮೇಲೆ ನಡೆಸಿದ ನಡವಳಿಗಳಲ್ಲಿ ದೋಷಾರೋಪವು ಸಾಬೀತಾಗಿ, ತತ್ಪರಿಣಾಮ ವಿಧಿಸಿದ ಶಿಕ್ಷೆಯನ್ನು ಅರ್ಜಿದಾರರು ಪ್ರಶ್ನಿಸಿಲ್ಲದ ಕಾರಣ ರಿಟ್ ಅರ್ಜಿದಾರರ ಅರ್ಜಿಯಲ್ಲಿ ಹುರುಳಿಲ್ಲವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಿದೆ.

*ಉಲ್ಲೇಖಿಸಲಾದ ಮೊಕದ್ದಮೆ* *ಪ್ಯಾರಾದಲ್ಲಿ*

1. *(1997) 3 ಎಸ್‌ಸಿಸಿ 636*
*ಕೃಷ್ಣಕಾಂತ್ ರಘುನಾತ್ ಬಿಭವ್‌ನೇಕರ್*
*–ವಿರುದ್ಧ–ಮಹಾರಾಷ್ಟ್ರ ರಾಜ್ಯ ಮತ್ತು ಇತರರು* *(ಉಲ್ಲೇ) 9*

*ರಿಟ್ ಅರ್ಜಿ ಸಂ. 21300/2011 (ಎಸ್–ಆರ್‌ಇಎಸ್), ದಿನಾಂಕ: 16ನೇ ಏಪ್ರಿಲ್, 2014.

ಅರ್ಜಿದಾರರ ಪರ : ಶ್ರೀ ಹೆಚ್.ಸುಬ್ರಹ್ಮಣ್ಯ ಜೋಯಿಸ್ – ಹಿರಿಯ ವಕೀಲರ ಪರವಾಗಿ, ಶ್ರೀಮತಿ ಬಿ.ಎಸ್.ವಿಜಯಲಕ್ಷ್ಮಿ ಇವರೊಂದಿಗೆ ಶ್ರೀ ಕೆ.ಸಿ.ಶಾಂತ ಕುಮಾರ್ – ವಕೀಲರು,
ಪ್ರತ್ಯಪೀಲುದಾರರ ಪರ : ಶ್ರೀ ಹೆಚ್.ಕಾಂತರಾಜ – ಎ.ಎ.ಜಿ,
1 & 2ನೇಪ್ರತ್ಯಪೀಲುದಾರರ ಪರ : ಶ್ರೀಮತಿ ಎಂ.ಎಸ್. ಪ್ರತಿಮಾ – ಹೆಚ್.ಸಿ.ಜಿ.ಪಿ.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ವೇಣುಗೋಪಾಲ ಗೌಡ:**

ಅರ್ಜಿದಾರರು, ಕರ್ನಾಟಕ ನ್ಯಾಯಿಕ ಸೇವೆಯ ಸದಸ್ಯರಾಗಿದ್ದು, ಅವರ ವಿರುದ್ಧ ನಡೆಸಲಾಗಿದ್ದ ಶಿಸ್ತು ವಿಚಾರಣೆಯ ತರುವಾಯ ಅವರು ತಪ್ಪಿತಸ್ಥರೆಂದು ತೀರ್ಮಾನವಾಗಿತ್ತು. ಅವರಿಗೆ ಸಂಚಿತ ಪರಿಣಾಮವಾಗದಂತೆ, ಎರಡು ಬಡ್ತಿಗಳನ್ನು ತಡೆಹಿಡಿಯುವ ಶಿಕ್ಷೆಯನ್ನು ವಿಧಿಸಲಾಯಿತು. ಸದರಿ ನಿರ್ಣಯವನ್ನು ಅರ್ಜಿದಾರರಿಗೆ ದಿನಾಂಕ 18.12.2008ರಂದು ತಿಳಿಸಲಾಯಿತು ಮತ್ತು ಅದರ ಪ್ರತಿಯನ್ನು ಮಹಾಲೇಖಾಪಾಲರು (ಎ ಮತ್ತು ಇ), ಕರ್ನಾಟಕ ಇವರಿಗೆ ಕಳುಹಿಸಲಾಯಿತು. ದಿನಾಂಕ 23.03.2009ರ ಪತ್ರದ ಮೂಲಕ ಮಹಾಲೇಖಾಪಾಲರ ಕಛೇರಿ (ಎ ಮತ್ತು ಇ), ಕರ್ನಾಟಕ ಇವರಿಂದ, ಅರ್ಜಿದಾರನು ದಿನಾಂಕ 31.01.2006ರಂದು ವಯೋನಿವೃತ್ತಿ ಹೊಂದಿರುವ ಕಾರಣದಿಂದ ಅವರಿಗೆ ವಿಧಿಸಿರುವ ಶಿಕ್ಷೆಯನ್ನು ಜಾರಿಗೊಳಿಸಲು ಸಾಧ್ಯವಾಗುವುದಿಲ್ಲ. ಹಣಕಾಸು ಸಲಹೆಗಾರರ ಅಭಿಪ್ರಾಯವನ್ನು ಪಡೆಯಲಾಗಿದ್ದು, ಶಿಕ್ಷೆಯನ್ನು ಮಾರ್ಪಾಡು ಮಾಡಲು ಪ್ರಸ್ತಾವಿಸಲಾಗಿತ್ತು ಎಂದು ಹೇಳಿಕೆ ನೀಡಿರುತ್ತಾರೆ. ಅರ್ಜಿದಾರರಿಗೆ ದಿನಾಂಕ 04.09.2010ರ ಷೋಕಾಸ್ ನೋಟೀಸು ನೀಡಲಾಯಿತು ಮತ್ತು ಅವರು ಅದಕ್ಕೆ ದಿನಾಂಕ 06.09.2010ರ ಉತ್ತರವನ್ನು ಸಲ್ಲಿಸಿದ್ದು, ಶಿಕ್ಷೆಯ ಆದೇಶವನ್ನು ಮರುಪರಿಶೀಲಿಸಲಾಯಿತು ಮತ್ತು ವಿಧಿಸಲಾಗಿದ್ದ ಶಿಕ್ಷೆಯನ್ನು ಮಾರ್ಪಾಡು ಮಾಡಲಾಯಿತು. ಅಮಾನತು ಅವಧಿಯನ್ನು ಹೇಗೆ ಪರಿಗಣಿಸಬೇಕೆಂದು ಸ್ಪಷ್ಟೀಕರಣ ಕೋರಿ, ಮಹಾಲೇಖಾಪಾಲರು (ಎ ಮತ್ತು ಇ), ಕರ್ನಾಟಕ ಇವರ ಕಛೇರಿಯಿಂದ ಮುಂದಿನ ಪತ್ರವನ್ನು ಸ್ವೀಕರಿಸಲಾಗಿರುತ್ತದೆ ಮತ್ತು ಅರ್ಜಿದಾರನ ಅಮಾನತು ಅವಧಿಯನ್ನು ಹಾಗೆಯೇ

ಪರಿಗಣಿಸಬೇಕು ಮತ್ತು ಅಮಾನತಿನ ಅವಧಿಯಲ್ಲಿ ಅರ್ಜಿದಾರನು ಜೀವನಾಧಾರ ಭತ್ಯೆಗೆ ಮಾತ್ರ ಹಕ್ಕುಳ್ಳವನಾಗುತ್ತಾನೆಂದು ಅನುಬಂಧ–ಎನ್ ನಲ್ಲಿರುವಂತೆ ದಿನಾಂಕ 29.04.2011ರ ದಿನಾಂಕದ ಪತ್ರವನ್ನು ಸ್ವೀಕರಿಸಲಾಗಿರುತ್ತದೆ. ಅನುಬಂಧ–ಎನ್ ಅನ್ನು ಖಂಡಿಸಿ, 6.11.2003ರಿಂದ 31.01.2006ರವರೆಗೆ ಅರ್ಜಿದಾರ ಕಳೆದಿರುವ ಅವಧಿಯನ್ನು, ಎಲ್ಲಾ ಆಶಯಗಳು ಮತ್ತು ಉದ್ದೇಶಗಳಿಗಾಗಿ, ಕರ್ತವ್ಯದ ಅವಧಿಯೆಂದು ಪರಿಗಣಿಸಲು ಮತ್ತು ಅದರಿಂದ ಬರುವ ಎಲ್ಲಾ ಹಣಕಾಸು ಪ್ರಯೋಜನಗಳು ಲಭ್ಯವಾಗುವಂತೆ ಮಾಡಲು, ಪ್ರತ್ಯರ್ಜಿದಾರ–1ರವರಿಗೆ ನಿರ್ದೇಶಿಸಲು ಮುಂದಿನ ಕೋರಿಕೆಯೊಂದಿಗೆ, ಭಾರತ ಸಂವಿಧಾನದ 226ನೇ ಅನುಚ್ಛೇದದ ಅಡಿಯಲ್ಲಿ ಈ ರಿಟ್ ಅರ್ಜಿಯನ್ನು ಸಲ್ಲಿಸಲಾಯಿತು.

2. ಮೊದಲನೆಯದಾಗಿ, ಶ್ರೀ ಹೆಚ್.ಸುಬ್ರಹ್ಮಣ್ಯ ಜೋಯಿಸ್, ಮಾನ್ಯ ಹಿರಿಯ ವಕೀಲರು, ಅರ್ಜಿದಾರನು ವಯೋನಿವೃತ್ತಿ ಹೊಂದಿದ ಸುಮಾರು ಒಂದು ವರ್ಷ ಹನ್ನೊಂದು ತಿಂಗಳ ನಂತರ ದಿನಾಂಕ 18.12.2008ರ ಆದೇಶವನ್ನು ಹೊರಡಿಸಲಾಗಿದ್ದು, ಆ ದಿನಾಂಕದಂದು ಇದ್ದಂತೆ ಅವರು ಸರ್ಕಾರಿ ನೌಕರನಾಗಿರಲಿಲ್ಲ ಎಂಬ ಕಾರಣಕ್ಕಾಗಿ ಅದು ಶೂನ್ಯವೆಂದು ಮತ್ತು ಆದುದರಿಂದ ಯಾವ ಶಿಕ್ಷೆಯನ್ನು ವಿಧಿಸಲಾಗುವುದಿಲ್ಲವೆಂದು ವಾದಿಸಿದ್ದಾರೆ. ಎರಡನೆಯುದಾಗಿ ವಜಾಗೊಳಿಸುವುದನ್ನಾಗಲೀ ಅಥವಾ ಕೆಲಸದಿಂದ ತೆಗೆಯುವುದನ್ನಾಗಲೀ ಅಥವಾ ಕಡ್ಡಾಯ ನಿವೃತ್ತಿಯನ್ನಾಗಲೀ ಆದೇಶಿಸಿರುವುದಿಲ್ಲ. ಅಮಾನತ್ತಿನ ಅವಧಿಗಾಗಿ ವೇತನ ತಡೆಯ ಆದೇಶ ಶೂನ್ಯವಾಗಿದೆ ಮತ್ತು ಅದಕ್ಕೆ ಕಾನೂನು ಅಧಿಕಾರವಿಲ್ಲ. ಮೂರನೆಯದಾಗಿ, ಕರ್ನಾಟಕ ಸಿವಿಲ್ ಸೇವಾ ನಿಯಮಗಳ 98ರಿಂದ 100ರವರೆಗಿನ ನಿಯಮಗಳನ್ನು ಕೆಲಸದಿಂದ ತೆಗೆಯುವ, ವಜಾ ಮಾಡುವ ಅಥವಾ ಕಡ್ಡಾಯ ನಿವೃತ್ತಿಯ ದಂಡನೆಯನ್ನು ಯಾರಿಗೆ ವಿಧಿಸಲಾಗಿದೆಯೋ ಆ ಸಿವಿಲ್ ನೌಕರನಿಗೆ ಸಂಬಂಧಿಸಿದಂತೆ ಮಾತ್ರ ಅನ್ವಯಿಸಲಾಗುವುದು ಮತ್ತು ವಿಧಿಸಲಾದ ಇತರ ಯಾವುದೇ ಶಿಕ್ಷೆಯು ಅಮಾನತ್ತಿನ ಅವಧಿಯನ್ನು ಪರಿಗಣಿಸಲು, ಹಾಗೆಯೇ, ಅಂದರೆ, ಅಮಾನತ್ತಿನ ಅವಧಿಗಾಗಿ ವೇತನ ಮತ್ತು ಭತ್ಯೆಗಳನ್ನು ನಿರಾಕರಿಸಲು ಎಳ್ಳಷ್ಟೂ ಅಧಿಕಾರ ನೀಡುವುದಿಲ್ಲ. ನಾಲ್ಕನೆಯದಾಗಿ, ಅಮಾನತ್ತಿನ ಅವಧಿಯನ್ನು

ಹೇಗೆ ಪರಿಗಣಿಸಬೇಕು ಮತ್ತು ಈಗಿನ ಪ್ರಕರಣದಲ್ಲಿ ಪರಿಗಣಿತ ಅದೇಶವಿಲ್ಲ ಎಂಬುದಕ್ಕೆ, ದಂಡನೆಯನ್ನು ವಿಧಿಸುವಾಗ ಪರಿಗಣಿತ ಆದೇಶವನ್ನು ಹೊರಡಿಸಲು ಸಕ್ಷಮ ಪ್ರಾಧಿಕಾರಕ್ಕೆ ನಿಯಮಗಳು ಆಧಾರವಾಗಿವೆ. ಐದನೆಯದಾಗಿ 4.9.2010ರಂದು ಇದ್ದಂತೆ, ಅರ್ಜಿದಾರನು ಈಗ ಸೇವೆಯಲ್ಲಿಲ್ಲ ಮತ್ತು ಯಾವುದೇ ಬಡ್ತಿಗೆ ಅರ್ಹನಲ್ಲ ಮತ್ತು ಆದ್ದರಿಂದ, ವಿಧಿಸಲಾದ ಅಂಥ ಶಿಕ್ಷೆಯು ಅಕೃತ ಮತ್ತು ಶೂನ್ಯವಾಗಿದ್ದು, ಕಾನೂನಿನ ಕಣ್ಣಿನಲ್ಲಿ ನಗಣ್ಯವಾಗಿದೆ ಮತ್ತು ತತ್ಪರಿಣಾಮವಾಗಿ, ಅರ್ಜಿದಾರನು ಪರಿಹಾರಕ್ಕೆ ಹಕ್ಕುಳ್ಳವನಾಗಿದ್ದಾನೆ.

3. ಇನ್ನೊಂದು ಕಡೆಯಲ್ಲಿ, ಶ್ರೀ ಕಾಂತರಾಜ, ಮಾನ್ಯ ಅಡಿಷನಲ್ ಅಡ್ವೋಕೇಟ್ ಜನರಲ್‌ರವರು, ವಿಚಾರಣಾ ಪ್ರಾಧಿಕಾರವು ಆರೋಪ–IVರ ಎರಡನೇ ಭಾಗದಲ್ಲಿ ಅರ್ಜಿದಾರನು ತಪ್ಪಿತಸ್ಥನೆಂದು ತೀರ್ಮಾನಿಸುವ ವರದಿ ಸಲ್ಲಿಸಿದ ನಂತರ, ಅರ್ಜಿದಾರನು ವಯೋನಿವೃತ್ತಿ ಹೊಂದಿರುವುದಾಗಿ ವಾದಿಸಿದ್ದಾರೆ. ಅವರು, ದಿನಾಂಕ 9.2.2007ರ ಷೋಕಾಸ್ ನೋಟೀಸಿಗೆ ಅರ್ಜಿದಾರನು ದಿನಾಂಕ 28.2.2007ರ ಉತ್ತರವನ್ನು ಸಲ್ಲಿಸಿದ್ದಾರೆ ಮತ್ತು ಸಕ್ಷಮ ಪ್ರಾಧಿಕಾರವು, ದಿನಾಂಕ 4.10.2008ರಂದು ಸಂಚಿತ ಪರಿಣಾಮವಿಲ್ಲದೆ ಎರಡು ಬಡ್ತಿಗಳನ್ನು ತಡೆ ಹಿಡಿಯುವ ದಂಡನೆಯನ್ನು ಅರ್ಜಿದಾರನಿಗೆ ವಿಧಿಸಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಅವರು ದಿನಾಂಕ 23.03.2009ರಂದು ಮಹಾಲೇಖಾಪಾಲರು (ಎ ಮತ್ತು ಇ), ಕರ್ನಾಟಕ ಇವರ ಕಛೇರಿಯಿಂದ ಸ್ವೀಕರಿಸಲಾದ ಪತ್ರದ ದೃಷ್ಟಿಯಿಂದ ಹಾಗೂ ದಿನಾಂಕ 19.3.2010ರಂದು ಹಣಕಾಸು ಸಲಹೆಗಾರರು ಒದಗಿಸಿದ ಅಭಿಪ್ರಾಯದಿಂದ, ಸಕ್ಷಮ ಪ್ರಾಧಿಕಾರವು ದಂಡನೆ ವಿಧಿಸುವ ಆದೇಶವನ್ನು ಜಾರಿಗೊಳಿಸುವುದಿಲ್ಲವೆಂದು ಅಭಿಪ್ರಾಯಪಟ್ಟಿರುವುದರಿಂದ ಮತ್ತು ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಹಾಗೂ ಅಪೀಲು) ನಿಯಮಗಳು, 1957ರ (ಸಂಕ್ಷಿಪ್ತವಾಗಿ 'ನಿಯಮ'ಗಳು) ನಿಯಮ 26ರ ಅಡಿಯಲ್ಲಿನ ಉಪಬಂಧದ ದೃಷ್ಟಿಯಲ್ಲಿ, ಷೋಕಾಸ್ ನೋಟೀಸನ್ನು ನೀಡಲಾಯಿತು ಮತ್ತು ದಿನಾಂಕ 6.9.2010ರ ಅರ್ಜಿದಾರನ ಉತ್ತರವನ್ನು ಪರಿಗಣಿಸಿದ ನಂತರ ಮಾರ್ಪಾಡು ಮಾಡಲಾದ ಶಿಕ್ಷೆಯನ್ನು ವಿಧಿಸಲಾಯಿತು

ಮತ್ತು ಆದ್ದರಿಂದ, ಪ್ರಶ್ನಿತ ಕ್ರಮದೊಂದಿಗೆ ಹಸ್ತಕ್ಷೇಪ ಮಾಡಲು ಅವಕಾಶವಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ.

4. ರಿಟ್ ದಾಖಲೆಯನ್ನು ಅವಲೋಕಿಸಿದೆ ಮತ್ತು ಪರಸ್ಪರ ವಿರುದ್ಧದ ವಾದಗಳನ್ನು ಪರಿಗಣಿಸಿದೆ. ನನ್ನ ಪರ್ಯಾಲೋಚನೆಯಲ್ಲಿ ಕಂಡುಬಂದ ಏಕೈಕ ಪ್ರಶ್ನೆಯೆಂದರೆ, 'ಅಮಾನತ್ತಿನ ದಿನಾಂಕದಿಂದ ಅಂದರೆ, 6.11.2003ರಿಂದ 31.01.2006ರಂದು ವಯೋನಿವೃತ್ತಿಯವರೆಗಿನ ಅವಧಿಯು, ಪೂರ್ಣವೇತನ ಹಾಗೂ ಭತ್ಯೆಗಳೊಂದಿಗೆ ಕರ್ತವ್ಯದ ಅವಧಿಯೆಂದು ಪರಿಗಣಿಸಲು ಹಕ್ಕುಳ್ಳದ್ದಾಗಿದೆಯೇ?' ಎಂಬುದಾಗಿದೆ.

5. ಪ್ರಕರಣದ ವಿವಾದಾತ್ಮಕವಲ್ಲದ ಸಂಗತಿಗಳಾವುವೆಂದರೆ, ಅರ್ಜಿದಾರನು ವಕ್ಫ್ ಮಂಡಳಿಯ ಅಧ್ಯಕ್ಷಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ, ಅವನನ್ನು ದಿನಾಂಕ 6.11.2003ರಂದು ಅಮಾನತ್ತಿನಲ್ಲಿಡಲಾಗಿತ್ತು ಮತ್ತು ದೋಷಾರೋಪಗಳ ಅನುಚ್ಛೇದಗಳನ್ನು ದಿನಾಂಕ 16.12.2003ರಂದು ಜಾರಿಗೊಳಿಸಲಾಯಿತು ಮತ್ತು 8.6.2004ರಂದು ನೇಮಕ ಮಾಡಲಾದ ವಿಚಾರಣಾ ಪ್ರಾಧಿಕಾರವು ವಿಚಾರಣೆ ನಡೆಸಿದ ನಂತರ, ಆರೋಪ–IVರ ಎರಡನೇ ಭಾಗದಲ್ಲಿ ಅರ್ಜಿದಾರನು ತಪ್ಪಿತಸ್ಥನೆಂದು ತೀರ್ಮಾನಿಸಿ ವರದಿ ಸಲ್ಲಿಸಿತು. ಸಂಚಿತ ಪರಿಣಾಮವಿಲ್ಲದೆ, ಎರಡು ಬಡ್ತಿಗಳನ್ನು ತಡೆಹಿಡಿಯುವ ಶಿಕ್ಷೆಯನ್ನು ದಿನಾಂಕ 18.12.2008ರಂದು ಜಾರಿಗೊಳಿಸಲಾಯಿತು ಮತ್ತು ಅದನ್ನು ಮಹಾಲೇಖಾಪಾಲರು (ಎ ಮತ್ತು ಇ), ಕರ್ನಾಟಕ ಇವರಿಗೆ ಕಳುಹಿಸಲಾಯಿತು. ಅವರು ಅರ್ಜಿದಾರನು ವಯೋನಿವೃತ್ತಿ ಹೊಂದಿರುವ ದೃಷ್ಟಿಯಲ್ಲಿ ವಿಧಿಸಲಾದ ದಂಡನೆಯನ್ನು ಜಾರಿಗೊಳಿಸಲಾಗುವುದಿಲ್ಲವೆಂದು ಸೂಚಿಸಿದ್ದಾರೆ.

6. ಅಧಿಸೂಚನೆ ಸಂಖ್ಯೆ ಡಿಪಿಎಆರ್ 8 ಎಸ್‌ಡಿಇ 93 ದಿನಾಂಕ 22.12.2005ರ ಮೂಲಕ ನಿಯಮ 26ನ್ನು ಪ್ರತ್ಯಾಯೋಜಿಸಲಾಯಿತು. ನಿಯಮವನ್ನು ಅಧಿಸೂಚನೆ ಸಂಖ್ಯೆ ಡಿಪಿಎಆರ್ 13 ಎಸ್‌ಡಿಇ 93 ದಿನಾಂಕ 1.9.2008ರ ಅನುಸಾರ ತಿದ್ದುಪಡಿ ಮಾಡಲಾಗಿದೆ. ತಿದ್ದುಪಡಿ ಮಾಡಲಾದ ನಿಯಮವು ಸುಸಂಬದ್ಧವಾಗಿದ್ದು ಹೀಗೆ ಓದಲ್ಪಡುತ್ತದೆ :

‘‘26. **ಪುನರವಲೋಕನ.– ರಾಜ್ಯ ಸರ್ಕಾರವು ಯಾವುದೇ ಸಮಯದಲ್ಲಿ ತನ್ನ ಸ್ವಂತ ನಿಲುವಳಿಯ ಮೇಲೆ ಅಥವಾ ಬೇರೆ ರೀತಿಯಲ್ಲಿ,** ಯಾವುದೇ ಹೊಸ ವಸ್ತು ಅಥವಾ ಸಾಕ್ಷ್ಯವು, ಅದನ್ನು ಹಾಜರುಪಡಿಸಲಾಗದಿದ್ದಾಗ ಅಥವಾ ಪುನರವಲೋಕನದ ಅಡಿಯಲ್ಲಿ ಆದೇಶವನ್ನು ಹೊರಡಿಸುವ ಸಮಯದಲ್ಲಿ ಅದು ಲಭ್ಯವಿರದಿದ್ದಾಗ ಮತ್ತು ಅದು ಪ್ರಕರಣದ ಸ್ವರೂಪವನ್ನು ಬದಲಿಸುವ ಪರಿಣಾಮ ಹೊಂದಿದ್ದಾಗ, ಅದು ತನ್ನ ಗಮನಕ್ಕೆ ಬಂದಿದೆ, ಅಥವಾ ಗಮನಕ್ಕೆ ತರಲಾಗಿದೆ **ಅಥವಾ ತನ್ನ ಅಭಿಪ್ರಾಯದಲ್ಲಿ ಯಾವುದೇ ದಂಡನೆಯನ್ನು ವಿಧಿಸುವ ಆದೇಶವನ್ನು ಜಾರಿಗೊಳಿಸಲಾಗುವುದಿಲ್ಲ ಎಂದಾದರೆ ಅಥವಾ ದಂಡನೆಯನ್ನು ವಿಧಿಸುವ ಆದೇಶವು ಕಾನೂನು ಪ್ರಕಾರ ಸಿಂಧುವಲ್ಲ ಎಂದಾದರೆ,** ಪ್ರಕರಣದ ದಾಖಲೆಗಳನ್ನು ಕೋರಿದ ನಂತರ, ಈ ನಿಯಮಗಳ ಅಡಿಯಲ್ಲಿ ಹೊರಡಿಸಲಾದ ಯಾವ ಆದೇಶವನ್ನು ಪುನರವಲೋಕಿಸತಕ್ಕದ್ದು, ಮತ್ತು

(ಎ) ಆದೇಶವನ್ನು ಸ್ಥಿರೀಕರಿಸುವುದು, ಮಾರ್ಪಾಟು ಮಾಡುವುದು ಅಥವಾ ಬದಿಗಿರಿಸುವುದು;

(ಬಿ) ಆದೇಶದ ಮೂಲಕ ಯಾವುದೇ ದಂಡನೆ ವಿಧಿಸುವುದು ಅಥವಾ ಬದಿಗಿರಿಸುವುದು, ವಿಧಿಸಲಾದ ದಂಡನೆಯನ್ನು ತಗ್ಗಿಸುವುದು, ಸ್ಥಿರೀಕರಿಸುವುದು ಅಥವಾ ಹೆಚ್ಚಿಸುವುದು;

(ಸಿ) ಪ್ರಕರಣದ ಸಂದರ್ಭಗಳಲ್ಲಿ ಸೂಕ್ತವೆಂದು ಪರಿಗಣಿಸಲಾದಂಥ ಮುಂದಿನ ಕ್ರಮ ಅಥವಾ ವಿಚಾರಣೆಯನ್ನು ನಿರ್ದೇಶಿಸಿ, ಆದೇಶವನ್ನು ಮಾಡಿದ

ಪ್ರಾಧಿಕಾರಕ್ಕೆ ಅಥವಾ ಇತರ ಯಾವುದೇ ಪ್ರಾಧಿಕಾರಕ್ಕೆ ಪ್ರಕರಣವನ್ನು ಕಳುಹಿಸುವುದು; ಅಥವಾ

(ಡಿ) **ಅದು ತಾನು ಸೂಕ್ತವೆಂದು ಭಾವಿಸುವಂಥ ಇತರ ಆದೇಶವನ್ನು ಹೊರಡಿಸುವುದು**:

ಪರಂತು, ಸಂಬಂಧಪಟ್ಟ ಸೇವೆಯ ಸದಸ್ಯನಿಗೆ, ಪ್ರಸ್ತಾವಿಸಲಾದ ದಂಡನೆಯ ವಿರುದ್ಧ ಮನವಿ ಸಲ್ಲಿಸುವ ಸೂಕ್ತ ಅವಕಾಶವನ್ನು ನೀಡಲಾಗಿದ್ದ ಹೊರತು ಅಥವಾ ನಿಯಮ 8ರ (v)ರಿಂದ (viii)ರವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ದೊಡ್ಡ ಪ್ರಮಾಣದ ದಂಡನೆಗಳನ್ನು ವಿಧಿಸಲು ಅಥವಾ ಪುನರವಲೋಕಿಸಲು ಕೋರಲಾದ ಆದೇಶದ ಮೂಲಕ ವಿಧಿಸಲಾದ ಸಣ್ಣ ಪ್ರಮಾಣದ ದಂಡನೆಯನ್ನು ದೊಡ್ಡ ಪ್ರಮಾಣದ ದಂಡನೆಗಳಿಗೆ ಹೆಚ್ಚಿಸಲು ಪ್ರಸ್ತಾವಿಸಿದ್ದ ಹೊರತು, ಯಾವುದೇ ದಂಡನೆಯನ್ನು ವಿಧಿಸುವ ಅಥವಾ ಹೆಚ್ಚಿಸುವ ಯಾವ ಆದೇಶವನ್ನೂ ರಾಜ್ಯ ಸರ್ಕಾರವು ಮಾಡತಕ್ಕದ್ದಲ್ಲ ಮತ್ತು ನಿಯಮ 11ರ ಅಡಿಯಲ್ಲಿ ವಿಚಾರಣೆಯನ್ನು ಪ್ರಕರಣದಲ್ಲಿ ಈಗಾಗಲೇ ನಡೆಸಿರದಿದ್ದಲ್ಲಿ, ನಿಯಮ 11ರಲ್ಲಿ ವಿಧಿಸಲಾದ ರೀತಿಯಲ್ಲಿ ವಿಚಾರಣೆ ನಡೆಸಿದ ನಂತರ ಹೊರತುಪಡಿಸಿ, ನಿಯಮ 14ರ ಉಪಬಂಧಗಳಿಗೆ ಒಳಪಟ್ಟು ಮತ್ತು ಆಯೋಗದೊಂದಿಗೆ ಸಮಾಲೋಚನೆ ನಡೆಸಿದ ನಂತರ ಹೊರತುಪಡಿಸಿ, ಅಂಥ ಯಾವ ದಂಡನೆಯನ್ನೂ ವಿಧಿಸತಕ್ಕದ್ದಲ್ಲ:

ಮತ್ತೂ ಪರಂತು, ನಿಯಮ 8ರ (v) ರಿಂದ (viii)ರವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಲಾದವುಗಳನ್ನು ಹೊರತುಪಡಿಸಿ, ಯಾವುದೇ ದಂಡನೆಯನ್ನು ವಿಧಿಸುವ ಶಿಸ್ತು ನಡವಳಿಗಳಲ್ಲಿ ಆದೇಶವನ್ನು ಪುನರವಲೋಕಿಸುವುದಕ್ಕಾಗಿ ಸರ್ಕಾರಿ ನೌಕರನು

> ಯಾವ ಅರ್ಜಿಯನ್ನೂ ಸಲ್ಲಿಸಬೇಕಿಲ್ಲ ಮತ್ತು ಅಪೀಲನ್ನು ಸಲ್ಲಿಸಿರುವುದಕ್ಕೆ ಸಂಬಂಧಿಸಿದಂತೆ, ಅದಕ್ಕೆ ಅವಕಾಶ ಇರತಕ್ಕದ್ದು."

7. ಹಳೆಯ ವೇತನ ಶ್ರೇಣಿಯ ಅನುಸಾರ, ರೂ. 992/– ಮೊತ್ತವಾಗುವ (ಪರಿಷ್ಕೃತ ವೇತನ ಶ್ರೇಣಿಯ ಅನುಸಾರ ರೂ. 2,460/–) ಎರಡು ಬಡ್ತಿಗಳನ್ನು ತಡೆಹಿಡಿಯುವುದಕ್ಕೆ ಸಮಾನವಾದ ಪಿಂಚಣಿಯನ್ನು ಕಡಿಮೆ ಮಾಡುವ ದಂಡನೆಯನ್ನು ಅರ್ಜಿದಾರನಿಗೆ ಏಕೆ ವಿಧಿಸಬಾರದು ಎಂದು ಪ್ರಶ್ನಿಸಿ, ದಿನಾಂಕ 4.9.2010ರ ಷೋಕಾಸ್ ನೋಟೀಸನ್ನು ನೀಡಲಾಗಿದ್ದು, ಅನುಬಂಧ–ಕೆ ನಲ್ಲಿರುವಂತೆ ದಿನಾಂಕ 6.9.2010ರ ಉತ್ತರವನ್ನು ಸಲ್ಲಿಸಲಾಗಿತ್ತು, ಅದರಲ್ಲಿ ಅರ್ಜಿದಾರನು ದೊಡ್ಡ ಆರೋಪಗಳಿಗೆ ತನ್ನ ವಿರುದ್ಧ ನಡೆಸಲಾದ ವಿಚಾರಣೆಯ ವಿಷಯವನ್ನು ಒಪ್ಪಿರುತ್ತಾನೆ ಮತ್ತು ವಿಚಾರಣೆಯ ನಂತರ ಸಣ್ಣ ಪ್ರಮಾಣದ ದಂಡನೆಯನ್ನು ವಿಧಿಸಲಾಗಿರುತ್ತದೆ ಮತ್ತು ಈ ರೀತಿ ಹೇಳಿಕೆ ನೀಡಲಾಗಿದೆ :

> "ಮುಖ್ಯ ಆದೇಶದಲ್ಲಿ, ಆದೇಶಿಸಲಾದಂತೆ, **ಸಂಚಿತ ಪರಿಣಾಮ ಇಲ್ಲದೆ,** ಎರಡು ಬಡ್ತಿಗಳನ್ನು ತಡೆಹಿಡಿಯುವುದಕ್ಕೆ ಸಮಾನವಾದ, ಪಿಂಚಣಿಯನ್ನು ಕಡಿಮೆ ಮಾಡುವ ದಂಡನೆಯನ್ನು ವಿಧಿಸಲು, ಮಾನ್ಯ ನ್ಯಾಯಾಧೀಶರು ಪ್ರಸ್ತಾವಿಸಿದ್ದಲ್ಲಿ, ಅದಕ್ಕೆ ನನ್ನ ಆಕ್ಷೇಪವಿಲ್ಲ".

8. ಅರ್ಜಿದಾರನು ದಿನಾಂಕ 31.01.2006ರಂದು ವಯೋನಿವೃತ್ತಿಯನ್ನು ಹೊಂದುವ ದೃಷ್ಟಿಯಿಂದ, ಅನುಬಂಧ–ಡಿ ಪ್ರಕಾರ 18.12.2008ರಂದು ವಿಧಿಸಲಾದ, ಸಂಚಿತ ಪರಿಣಾಮವಿಲ್ಲದೆ ಎರಡು ಬಡ್ತಿಗಳನ್ನು ತಡೆಹಿಡಿಯುವ ಶಿಕ್ಷೆಯನ್ನು ಜಾರಿಗೊಳಿಸಲು ಸಾಧ್ಯವಾಗದಿರುವ ಕಾರಣ, ನಿಯಮ 26ರ ಅಡಿಯಲ್ಲಿನ ಉಪಬಂಧಕ್ಕೆ ಸಂಬಂಧಿಸಿದಂತೆ ಅನುಬಂಧ–ಜೆ ಅನುಸಾರ ಸದರಿ ಕ್ರಮವನ್ನು ತೆಗೆದುಕೊಳ್ಳಲಾಯಿತು. ಅರ್ಜಿದಾರನು, ಅನುಬಂಧ–ಜೆ ಅನುಸಾರ ಷೋಕಾಸ್ ನೋಟೀಸಿಗೆ ಉತ್ತರವಾಗಿ, ಅನುಬಂಧ–ಕೆ ಅನುಸಾರ ದಿನಾಂಕ 6.9.2010ರಂದು ಪೂರ್ಣ ತಿಳಿವಳಿಕೆಯೊಂದಿಗೆ

ಸಮ್ಮತಿಸಿರುತ್ತಾನೆ ಮತ್ತು ಅನುಬಂಧ–ಎಲ್ ಅನುಸಾರ ದಿನಾಂಕ 3.12.2010ರಂದು ವಿಧಿಸಲಾದ, ಮಾರ್ಪಾಟಾದ ಶಿಕ್ಷೆಯನ್ನು ಪ್ರಶ್ನಿಸಿರುವುದಿಲ್ಲ. ವಿಬಂಧ, ಮೌನಸಮ್ಮತಿ ಮತ್ತು ಬಿಟ್ಟುಕೊಡುವಿಕೆಯ ತತ್ವಗಳು ಅನ್ವಯುವಾಗಿವೆ. ಆದ್ದರಿಂದ ಶ್ರೀ ಹೆಚ್.ಸುಬ್ರಹ್ಮಣ್ಯ ಜೋಯಿಸ್ ಮಂಡಿಸಿದ ಮೊದಲ ಮತ್ತು ಐದನೆಯ ವಾದಗಳನ್ನು ಅಂಗೀಕರಿಸಲಾಗುವುದಿಲ್ಲ.

9. ***ಕೃಷ್ಣಕಾಂತ್ ರಘುನಾತ್ ಬಿಭವ್‌ನೆಕರ್ –ವಿರುದ್ಧ– ಮಹಾರಾಷ್ಟ್ರ ರಾಜ್ಯ ಮತ್ತು ಇತರರು***[1]***,*** ಪ್ರಕರಣದ ಬಾಕಿ ಇರುವ ಕ್ರಿಮಿನಲ್ ಅಧಿವಿಚಾರಣೆಯಲ್ಲಿ, ಅಪೀಲುದಾರನನ್ನು ಅಮಾನತ್ತಿನಲ್ಲಿಡಲಾಯಿತು ಮತ್ತು ಜೀವನಾಧಾರ ಭತ್ಯೆಯನ್ನು ನೀಡಲಾಯಿತು. ಅವನು ಆರೋಪ ಮುಕ್ತನಾದ ನಂತರ, ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳಲಾಯಿತು, ಆದರೆ ತತ್ಪರಿಣಾಮವಾದ ಪ್ರಯೋಜನಗಳನ್ನು ನೀಡಿರುವುದಿಲ್ಲ. ಮಹಾರಾಷ್ಟ್ರ ಸಿವಿಲ್ ಸೇವಾ (ಕೆಲಸಕ್ಕೆ ಸೇರುವ ಅವಧಿ, ವಿದೇಶಿ ಸೇವೆಗಳು, ಮತ್ತು ಅಮಾನತ್ತಿನ ಅವಧಿಯಲ್ಲಿ ಸಂದಾಯ, ವಜಾ ಮಾಡುವಿಕೆ, ಕೆಲಸದಿಂದ ತೆಗೆಯುವಿಕೆ) ನಿಯಮಗಳು, 1991ರ ನಿಯಮ 72, ಅಮಾನತ್ತಿನ ಅವಧಿಯಲ್ಲಿ ಸಂದಾಯವನ್ನು ನಿಯಂತ್ರಿಸಲು ಶಿಸ್ತು ಪ್ರಾಧಿಕಾರಕ್ಕೆ ವಿವೇಚನಾಧಿಕಾರವನ್ನು ನೀಡಲಾಯಿತು. ಅಪೀಲುದಾರನು ತತ್ಪರಿಣಾಮವಾದ ಪ್ರಯೋಜನಗಳ ಅನುದಾನಕ್ಕಾಗಿ ಆಡಳಿತ ನ್ಯಾಯಮಂಡಳಿಯನ್ನು ಸಂಪರ್ಕಿಸಿದನು ಮತ್ತು ನ್ಯಾಯಮಂಡಳಿಯು ಅರ್ಜಿಯನ್ನು ವಜಾಮಾಡಿತು, ನಿಯಮಗಳ ಅಡಿಯಲ್ಲಿ ಅಧಿಕೃತಗೊಳಿಸಿರದ ಕಾರಣ, ನಿಯಮ 72(3)ನ್ನು ಅಪೀಲುದಾರನಿಗೆ ಅನ್ವಯಿಸಲಾಗುವುದಿಲ್ಲ ಅಥವಾ ಅಮಾನತ್ತಿನ ಅವಧಿಯನ್ನು, ಅಮಾನತ್ತಿನ ಅವಧಿಯೆಂದು ಪರಿಗಣಿಸುವಲ್ಲಿ, ಪ್ರತಿವಾದಿಗಳು ಸಮರ್ಥರಾಗಿಲ್ಲವೆಂದು ವಾದಿಸಿ ಅಪೀಲು ಸಲ್ಲಿಸಲಾಗಿರುತ್ತದೆ. ಸರ್ಕಾರಿ ನೌಕರನು ಅಪರಾಧಗಳಿಂದ ಮುಕ್ತನಾದಾಗ ಮತ್ತು ಅವನನ್ನು ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳಲು ಹಕ್ಕುಳ್ಳವನೆಂದು ನಿರ್ಧರಿಸಿದಾಗ, ಪಿಂಚಣಿ ಪ್ರಯೋಜನಗಳು, ಅಮಾನತ್ತಿನ ಅವಧಿಯನ್ನು ಕರ್ತವ್ಯದ ಅವಧಿಯೆಂದು ಪರಿಗಣಿಸುವುದೂ ಸೇರಿದಂತೆ, ತತ್ಪರಿಣಾವಾದ ಎಲ್ಲಾ ಪ್ರಯೋಜನಗಳಿಗೆ ಆ ವ್ಯಕ್ತಿಯು ಹಕ್ಕುಳ್ಳವನಾಗುತ್ತಾನೆಯೇ?

1. (1997) 3 ಎಸ್‌ಸಿಸಿ 636

ಎಂಬ ಪ್ರಶ್ನೆಯನ್ನು ಪರಿಗಣಿಸುವಾಗ, ಅಪೆಕ್ಸ್ ನ್ಯಾಯಾಲಯವು ಈ ಮುಂದಿನಂತೆ ತೀರ್ಮಾನಿಸಿರುತ್ತದೆ:

> "4. ಶ್ರೀ ರಂಜಿತ್ ಕುಮಾರ್, ಅಪೀಲುದಾರರಪರ ಮಾನ್ಯ ವಕೀಲರು ಮಹಾರಾಷ್ಟ್ರ ಸಿವಿಲ್ ಸೇವಾ (ಕೆಲಸಕ್ಕೆ ಸೇರುವ ಅವಧಿ, ವಿದೇಶಿ ಸೇವೆಗಳು, ಮತ್ತು ಅಮಾನತ್ತಿನ ಅವಧಿಯಲ್ಲಿ ಸಂದಾಯ, ವಜಾ ಮಾಡುವಿಕೆ ಹಾಗೂ ಕೆಲಸದಿಂದ ತೆಗೆಯುವಿಕೆ) ನಿಯಮಗಳು, 1991ರ (ಸಂಕ್ಷಿಪ್ತವಾಗಿ 'ನಿಯಮಗಳು') ನಿಯಮ 72(3)ರ ಅಡಿಯಲ್ಲಿ, ನಿಯಮಗಳ ಅಡಿಯಲ್ಲಿ ಅಧಿಕೃತಗೊಳಿಸಿರದ ಕಾರಣ, ನಿಯಮಗಳನ್ನು ಅಪೀಲುದಾರನಿಗೆ ಅನ್ವಯಿಸಲಾಗುವುದಿಲ್ಲ ಅಥವಾ ಅಪೀಲುದಾರನ ಅಮಾನತ್ತಿನ ಅವಧಿಯುನ್ನು, ಅಮಾನತ್ತಿನ ಅವಧಿಯೆಂದು ಪರಿಗಣಿಸುವಲ್ಲಿ ಪ್ರತಿವಾದಿಗಳು ಸಮರ್ಥರಾಗಿಲ್ಲವೆಂದು ವಾದಿಸಿರುತ್ತಾರೆ. ಒಬ್ಬ ಸರ್ಕಾರಿ ನೌಕರನು, ಅಪರಾಧಗಳಿಂದ ಮುಕ್ತನಾದಾಗ, ಅವನನ್ನು ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳಲು ಹಕ್ಕುಳ್ಳವನಾಗುತ್ತಾನೆಂಬುದು ಸತ್ಯ. ಆದರೆ ಅವನು ಶ್ರೀ ರಂಜಿತ್ ಕುಮಾರ್‌ರವರು ವಾದಿಸಿರುವಂತೆ, ಪಿಂಚಣಿ ಪ್ರಯೋಜನಗಳು, ಅಮಾನತ್ತಿನ ಅವಧಿಯುನ್ನು ಕರ್ತವ್ಯದ ಅವಧಿಯೆಂದು ಪರಿಗಣಿಸುವುದು ಸೇರಿದಂತೆ, ತತ್ಪರಿಣಾಮವಾದ ಎಲ್ಲಾ ಪ್ರಯೋಜನಗಳಿಗೆ ಹಕ್ಕುಳ್ಳವನಾಗಿರುತ್ತಾನೆಯೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಪ್ರಾಸಿಕ್ಯೂಷನ್ ಹಿಂದಿನ ಕಾನೂನು ಮಂಜೂರಾತಿಯ ಉದ್ದೇಶವು ಸಮಾಜದ ವಿರುದ್ಧದ ಅಪರಾಧಗಳನ್ನು ಅಂತ್ಯಗೊಳಿಸುವುದಾಗಿದೆ ಮತ್ತು ಕಾನೂನು ಆ ಮೂಲಕ ಸಾಮಾಜಿಕ ಸುವ್ಯವಸ್ಥೆ ಮತ್ತು ಸ್ಥಿರತೆಯನ್ನು ಕಾಪಾಡಲು ಉದ್ದೇಶಿಸುತ್ತದೆ. ಒಬ್ಬ ಸರ್ಕಾರಿ ನೌಕರನನ್ನು ಪ್ರಾಸಿಕ್ಯೂಷನ್‌ಗೆ ಒಳಪಡಿಸುವ ಉದ್ದೇಶವು ಸೇವೆಯಲ್ಲಿ ಶಿಸ್ತು, ಸಾರ್ವಜನಿಕ ಕರ್ತವ್ಯವನ್ನು ನಿರ್ವಹಿಸುವಲ್ಲಿ ಸಮಗ್ರತೆ, ಸತ್ಯನಿಷ್ಠೆ ಮತ್ತು ಪ್ರಾಮಾಣಿಕ ನಡವಳಿಕೆ

ಅಥವಾ ಸಾರ್ವಜನಿಕ ಸೇವೆಯಲ್ಲಿ ಇನ್ನಷ್ಟು ದಕ್ಷತೆಯಿಂದ ಕಾರ್ಯನಿರ್ವಹಿಸಲು ಅವನ ನಡತೆಯಲ್ಲಿ ಪರಿವರ್ತನೆಗಾಗಿ ಶಿಸ್ತನ್ನು ಕಾಪಾಡುವುದಾಗಿದೆ. ಸಂವಿಧಾನವು ಸಾರ್ವಜನಿಕ ಕಾರ್ಯಗಳಿಗೆ ಸಂಪೂರ್ಣ ನಂಬಿಕೆ ಮತ್ತು ವಿಶ್ವಾಸ ತೋರಿದೆ. ಸರ್ಕಾರಿ ನೌಕರನ ನಡತೆಯು ತೆರೆದ ಪುಸ್ತಕವಾಗಬೇಕು. ಭ್ರಷ್ಟಾಚಾರವು ಪ್ರತಿಯೊಬ್ಬರಿಗೂ ಗೊತ್ತಾಗುತ್ತದೆ. ಖ್ಯಾತಿಯು ಕುಖ್ಯಾತಿಯನ್ನು ಪಡೆಯುತ್ತದೆ. ಸಂಶಯಾತೀತವಾದ ಅಥವಾ ತಪ್ಪು ತಿಳಿಯಲು ಆಸ್ಪದವಿಲ್ಲದ ತಪ್ಪನ್ನು ಮನವರಿಕೆ ಮಾಡಿಕೊಡಲು ಕಾನೂನಿನ ಸಾಕ್ಷ್ಯವು ಸಾಕಷ್ಟಿರದಿದ್ದರೂ, ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳುವ ಕಾರ್ಯವು ಕಚೇರಿ/ವಾಸಸ್ಥಳದ ಜನರಲ್ಲಿ ಸಂಶಯದ ಅಲೆಗಳನ್ನು ಮೂಡಿಸುತ್ತದೆ ಮತ್ತು ನೈತಿಕತೆ, ಸಮಗ್ರತೆ ಮತ್ತು ನ್ಯಾಯಸಮ್ಮತ ನಡವಳಿಕೆ ಮತ್ತು ಸಾರ್ವಜನಿಕ ಕರ್ತವ್ಯದ ದಕ್ಷ ನಿರ್ವಹಣೆಯ ಅವನತಿಗೆ ತಪ್ಪು ಸಂಕೇತಗಳನ್ನು ಬಿತ್ತುತ್ತದೆ. ಸಾರ್ವಜನಿಕ ಕಾರ್ಯಗಳಿಗೆ ನೀಡಲಾದ ಸಾರ್ವಜನಿಕ ನಂಬಿಕೆ ಮತ್ತು ವಿಶ್ವಾಸದ ಸಾಂವಿಧಾನಿಕ ಉತ್ತೇಜನವನ್ನು ಕುಗ್ಗಿಸುತ್ತದೆ. ಸಾರ್ವಜನಿಕ ನೌಕರನ ಪ್ರತಿಯೊಂದು ಕಾರ್ಯ ಅಥವಾ ನಡತೆಯು ಸಾರ್ವಜನಿಕ ಉದ್ದೇಶ ಹಾಗೂ ಸಾಂವಿಧಾನಿಕ ವಸ್ತುನಿಷ್ಠತೆಯನ್ನು ಪರಿಣಾಮಕಾರಿಯಾಗಿಸುತ್ತದೆ. ಸಾರ್ವಜನಿಕ ನೌಕರನು ಸಾರ್ವಜನಿಕರಿಗೆ ತಾನು ಜವಾಬ್ದಾರಿ ಇರುವವನೆಂದು ತೋರಿಸಿಕೊಳ್ಳುತ್ತಾನೆ. ಅರ್ಜಿದಾರನ ಅಮಾನತ್ತಿಗೆ ಮತ್ತು ಅವನ ವಿರುದ್ಧ ದಂಡನಾತ್ಮಕ ಕ್ರಮ ತೆಗೆದುಕೊಳ್ಳುವುದಕ್ಕೆ ಕಾರಣವು ಭಾರತ ದಂಡ ಸಂಹಿತೆಯ ಅಡಿಯಲ್ಲಿನ ಅಪರಾಧಗಳಿಗಾಗಿ ಅವನ ಪ್ರಾಸಿಕ್ಯೂಷನ್‌ಗೆ ಕಾರಣವಾದ ಅವನ ನಡತೆಯಾಗಿತ್ತು. ಆಪಾದಿಸಲಾದ ನಡತೆಯು ಪ್ರಾಸಿಕ್ಯೂಷನ್‌ಗೆ ಮೂಲಕಾರಣವಾದರೆ, ಅದು ಗುಣಾವಗುಣಗಳ ವಿವೇಚನೆ ಮೇಲೆ ದೋಷಮುಕ್ತವಾಗುವಲ್ಲಿ ಅಥವಾ ಸಾಕಷ್ಟು ಸಾಕ್ಷ್ಯಗಳ ಕೊರತೆಯಲ್ಲಿ ಮುಕ್ತಾಯವಾದರೂ ಸಹ, ಸರ್ಕಾರಿ ನೌಕರನನ್ನು ಸಾರ್ವಜನಿಕ ನಿಧಿಗಳ

ದುರುಪಯೋಗ ಮಾಡಿಕೊಂಡಿದ್ದಕ್ಕಾಗಿ ಮತ್ತು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿದ್ದಕ್ಕಾಗಿ ಪ್ರಾಸಿಕ್ಯೂಷನ್‌ಗೆ ಒಳಪಡಿಸಲಾಗಿದ್ದು, ದೋಷಮುಕ್ತನೆಂದು ಮುಕ್ತಾಯಗೊಳಿಸಿದ್ದರೂ ಸಹ, ಅವನು ತತ್ಪರಿಣಾಮವಾದ ಪ್ರಯೋಜನಗಳೊಂದಿಗೆ ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳಲು ಹಕ್ಕುಳ್ಳವನಾಗಿದ್ದಾನೆಯೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ನಮ್ಮ ಪರಿಗಣಿತ ಅಭಿಪ್ರಾಯದಲ್ಲಿ, ಹಿಂದಿನ ಎಲ್ಲಾ ಮಜೂರಿ, ಇತ್ಯಾದಿಯೊಂದಿಗೆ ಈ ತತ್ಪರಿಣಾಮವಾದ ಪ್ರಯೋಜನಗಳ ಅನುದಾನವು ಸಹಜವಾದದ್ದಾಗುವುದಿಲ್ಲ. ಸಿಂಧುವಾದ ಪರಿಗಣನೆಗಳ ಮೇಲೆ, ಅಮಾನತ್ತಾಗಿದ್ದ ಒಬ್ಬ ವ್ಯಕ್ತಿಗೆ, ಅವನ ನಿರಪರಾಧ ನಿರ್ಣಯದ ಆಧಾರದ ಮೇಲೆ ಹಿಂದಿನ ಸಂಪೂರ್ಣ ಮಜೂರಿಗಳನ್ನು ಸಹಜವಾಗಿ ನೀಡಲಾಗಿದ್ದಲ್ಲಿ, ಶಿಸ್ತನ್ನು ಕಾಪಾಡಿಕೊಳ್ಳುವುದು ನೈತಿಕವಾಗಿ ಹಾನಿಕರವೆಂಬುದು ನಮ್ಮ ಅಭಿಪ್ರಾಯವಾಗಿದೆ. ಶಿಸ್ತು ಪ್ರಾಧಿಕಾರಕ್ಕೆ ಎರಡು ಮಾರ್ಗಗಳಿವೆ. ಅಂದರೆ, ಅದೇ ವ್ಯಕ್ತಿಯ ನಡತೆಯು ಆರೋಪದ ವಿಷಯವಾಗಿದ್ದ ಹೊರತು ಮತ್ತು ಅಧಿವಿಚಾರಣೆಯು ಮೇಲೆ, ಆಪಾದಿತ ಅಪರಾಧವನ್ನೇ ಮಾಡಿಲ್ಲವೆಂದು ಸಕಾರಾತ್ಮಕ ನಿರ್ಣಯದ ಮೇಲೆ ನಿರಪರಾಧ ನಿರ್ಣಯುವನ್ನು ದಾಖಲಿಸಲಾಗಿದ್ದ ಹೊರತು, ದುರ್ವರ್ತನೆಯನ್ನು ವಿಚಾರಣೆ ಮಾಡಬಹುದು; ಆದರೆ, ನಿರಪರಾಧ ನಿರ್ಣಯವನ್ನು ಸಂಶಯದ ಲಾಭ ಪಡೆದು ನೀಡಿರುವುದಲ್ಲ. ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬಹುದು. ಹಾಗಿಲ್ಲದಿದ್ದರೂ, ಪ್ರಾಧಿಕಾರವು, ಸ್ವಾಭಾವಿಕ ನ್ಯಾಯದ ತತ್ವವನ್ನು ಅನುಸರಿಸಿದ ನಂತರ ಕೆಲಸಕ್ಕೆ ಮತ್ತೆ ಸೇರಿಸಿಕೊಳ್ಳುವುದರ ಮೇಲೆ, ಅಮಾನತ್ತು ಅವಧಿಯನ್ನು ಕರ್ತವ್ಯದ ಅವಧಿಯಲ್ಲವೆಂದು ಪರಿಗಣಿಸುವುದು (ಮತ್ತು ಜೀವನಾಧಾರ ಭತ್ಯೆ ಇತ್ಯಾದಿಯ ಸಂದಾಯದ ಮೇಲೆ) ಸೇರಿದಂತೆ, ಸೂಕ್ತ ಆದೇಶವನ್ನು ಜಾರಿ ಮಾಡಬಹುದು. 72(3), 72(5) ಮತ್ತು 72(7)ನೇ ನಿಯಮಗಳನ್ನು ಶಿಸ್ತು ಪ್ರಾಧಿಕಾರದ

ವಿವೇಚನೆಗೆ ಬಿಡಲಾಗಿದೆ. 72ನೇ ನಿಯಮವು ಸಹ ಅದು ಜಾರಿಯಲ್ಲಿದ್ದ ದಿನಾಂಕದಿಂದ ನಿರಪರಾಧ ನಿರ್ಣಯದ ನಂತರ ಕ್ರಮ ತೆಗೆದುಕೊಂಡಾಗ ಅನ್ವಯವಾಗುತ್ತದೆ. ಆದ್ದರಿಂದ, ಅಮಾನತ್ತು ಅವಧಿಯನ್ನು ಅಧಿವಿಚಾರಣೆಯು ಬಾಕಿ ಇರುವ ಅಮಾನತ್ತೆಂದು ಪರಿಗಣಿಸಿರುವಾಗ ಮತ್ತು ನಿರಪರಾಧ ನಿರ್ಣಯದ ನಂತರವೂ ಅವನನ್ನು ಸೇವೆಗೆ ಮತ್ತೆ ಸೇರಿಸಿಕೊಳ್ಳಲಾಗಿದ್ದು, ತತ್ಪರಿಣಾಮವಾದ ಪ್ರಯೋಜನಗಳಿಗೆ ಅವನು ಅರ್ಹನಾಗುವುದಿಲ್ಲ. ತತ್ಪರಿಣಾಮವಾಗಿ ಹೆಚ್ಚುವರಿ ಅಫಿಡವಿಟ್‌ನ ಕಂಡಿಕೆ 6ರಲ್ಲಿ ಹೇಳಲಾದಂತೆ 9 ಬಡ್ತಿಗಳ ಪ್ರಯೋಜನಕ್ಕೆ ಅವನು ಅರ್ಹನಾಗುವುದಿಲ್ಲ. ಪಿಂಚಣಿ ಪ್ರಯೋಜನಗಳು, ಇತ್ಯಾದಿಯ ಲೆಕ್ಕಾಚಾರದ ಉದ್ದೇಶಕ್ಕಾಗಿ ಅಮಾನತ್ತಿನ ದಿನಾಂಕದಿಂದ ನಿರಪರಾಧ ನಿರ್ಣಯದ ದಿನಾಂಕದವರೆಗೆ ಕರ್ತವ್ಯದಲ್ಲಿದ್ದುದಾಗಿ ಪರಿಗಣಿಸಲು ಸಹ ಅವನು ಅರ್ಹನಾಗಿಲ್ಲ. ಅಪೀಲುದಾರನು ಹೆಚ್ಚುವರಿ ಅಫಿಡವಿಟ್‌ನ 5 ಮತ್ತು 6ನೇ ಕಂಡಿಕೆಯಲ್ಲಿ ಲೆಕ್ಕಹಾಕಲಾದಂತೆ, ತತ್ಪರಿಣಾಮವಾದ ಯಾವುದೇ ಇತರ ಪ್ರಯೋಜನಗಳಿಗೆ ಸಹ ಅರ್ಹನಾಗುವುದಿಲ್ಲ''.

10. ಕರ್ನಾಟಕ ಸಿವಿಲ್ ಸೇವಾ ನಿಯಮಗಳ ನಿಯಮ 100ರ (1)ನೇ ಉಪನಿಯಮವನ್ನು ಈ ರೀತಿ ಓದಲಾಗಿದೆ. :

``100. (1) ಅಮಾನತ್ತು ಮಾಡಲಾದ ಒಬ್ಬ ಸರ್ಕಾರಿ ನೌಕರನನ್ನು ಮತ್ತೆ ಕೆಲಸಕ್ಕೆ ಸೇರಿಸಿಕೊಂಡಾಗ ಅಥವಾ ಹಾಗೆ ಸೇರಿಸಿಕೊಂಡಿದ್ದು, ಆದರೆ ಅವನು ಅಮಾನತ್ತಿನಲ್ಲಿದ್ದಾಗ ವಯೋನಿವೃತ್ತಿಯ ಮೇಲೆ, ಅವನ ನಿವೃತ್ತಿಗಾಗಿ, ಅವನನ್ನು ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳಲು ಆದೇಶಿಸುವ ಸಕ್ಷಮ ಪ್ರಾಧಿಕಾರವು :

(ಎ) ಮತ್ತೆ ಕೆಲಸಕ್ಕೆ ಸೇರಿಸಿಕೊಂಡಿದ್ದರಿಂದ ಮುಕ್ತಾಯಗೊಳ್ಳುವ ಅಮಾನತ್ತು ಅವಧಿಗಾಗಿ ಅಥವಾ ಸಂದರ್ಭಾನುಸಾರ, ವಯೋನಿವೃತ್ತಿಯ ಮೇಲೆ ಅವನು ನಿವೃತ್ತಿಯಾಗುವ ದಿನಾಂಕದಿಂದ, ಆ ಸರ್ಕಾರಿ ನೌಕರನಿಗೆ ಸಂದಾಯ ಮಾಡಬೇಕಾದ ವೇತನ ಮತ್ತು ಜೀವನಾಧಾರ ಭತ್ಯೆಗಳನ್ನು ಕುರಿತು; ಮತ್ತು

(ಬಿ) ಸದರಿ ಅವಧಿಯನ್ನು ಕರ್ತವ್ಯದ ಅವಧಿಯೆಂದು ಪರಿಗಣಿಸಬೇಕೇ? ಅಥವಾ ಬೇಡವೇ?

– ಎಂಬುದನ್ನು ಪರಿಗಣಿಸಿ, ವಿಶೇಷ ಆದೇಶವನ್ನು ಮಾಡತಕ್ಕದ್ದು.

11. ಅರ್ಜಿದಾರನು ದೋಷಾರೋಪ–IVರ ಎರಡನೇ ಭಾಗದ ತಪ್ಪಿತಸ್ಥನೆಂದು ನಿರ್ಣಯಿಸಲಾಯಿತು ಮತ್ತು ಸಂಚಿತ ಪರಿಣಾಮವಿಲ್ಲದೆ ಎರಡು ಬಡ್ತಿಗಳನ್ನು ತಡೆಹಿಡಿಯುವ ಶಿಕ್ಷೆಯನ್ನು ವಿಧಿಸಲಾಯಿತು. ನಿಯಮ 260ರ ಅಡಿಯಲ್ಲಿ ಅಧಿಕಾರ ಚಲಾಯಿಸಿ ಪರಿಶೀಲಿಸಿದ ಮೇಲೆ, ಅರ್ಜಿದಾರನು ವಯೋನಿವೃತ್ತಿಯನ್ನು ಹೊಂದಿರುವ ಕಾರಣ, ಅವನಿಗೆ ಮುಂದಿನ ಬಡ್ತಿಗಳನ್ನು ತಡೆಹಿಡಿಯುವ ದಂಡನೆಯನ್ನು ಕಾರ್ಯಗತಗೊಳಿಸಲಾಗುವುದಿಲ್ಲವೆಂದು ಸಕ್ಷಮ ಪ್ರಾಧಿಕಾರವು ಒಮ್ಮೆ ನಿರ್ಣಯಿಸಿದ ಮೇಲೆ, ಸೂಕ್ತ ದಂಡನೆಯ ಮೂಲಕ ಆ ದಂಡನೆಯನ್ನು ಮಾರ್ಪಾಡುಗೊಳಿಸಲು ನಿರ್ಧರಿಸಲಾಯಿತು. ಮತ್ತು ಅನುಬಂಧ–ಜೆ ಅನುಸಾರ ಷೋಕಾಸ್ ನೋಟೀಸನ್ನು ನೀಡಲಾಯಿತು. ಅದಕ್ಕೆ ಅರ್ಜಿದಾರನು ಅನುಬಂಧ–ಕೆ ಅನುಸಾರ 6.9.2010ರಂದು ಅದಕ್ಕೆ ತನ್ನ ಯಾವುದೇ ಆಕ್ಷೇಪವಿಲ್ಲವೆಂದು ಹೇಳಿದ್ದಾನೆ. ಅಂದರೆ, ಮುಖ್ಯ ಆದೇಶದಲ್ಲಿ ಆದೇಶಿಸಲಾದಂತೆ ಸಂಚಿತ ಪರಿಣಾಮವಿಲ್ಲದೆ ಎರಡು ಬಡ್ತಿಗಳನ್ನು ತಡೆಹಿಡಿಯಲು ಸಮಾನವಾದ, ಪಿಂಚಣಿಯನ್ನು ಕಡಿತಗೊಳಿಸುವ ದಂಡನೆಯನ್ನು ವಿಧಿಸುವುದಕ್ಕೆ ಅವನ ಆಕ್ಷೇಪವೇನೂ ಇರಲಿಲ್ಲ. ಈಗಾಗಲೇ ಗಮನಿಸಲಾದಂತೆ, ಅನುಬಂಧ–ಎಲ್ ಅನುಸಾರ 52,780/– ರೂ. ವೇತನದಿಂದ ಪ್ರತಿ ತಿಂಗಳಿಗೆ 2,460/– ರೂ.ಗಳ ಕಡಿತವನ್ನು (ಪರಿಷ್ಕೃತ ವೇತನ ಶ್ರೇಣಿಯ ಅನುಸಾರ ಎರಡು

ಬಡ್ತಿಗಳ ಮೊತ್ತಕ್ಕೆ ಸಮನಾದ) ಮಾಡಲು ವಿಧಿಸಲಾದ ಮಾರ್ಪಾಟಾದ ದಂಡನೆಯನ್ನು ಪ್ರಶ್ನಿಸದೆ ಉಳಿಸಲಾಗಿದೆ.

12. ಶಿಸ್ತುವಿಚಾರಣೆಯನ್ನು ಬಾಕಿ ಇರಿಸಿ, ಅಮಾನತ್ತುಗೊಳಿಸಲಾಗಿದ್ದ ಅರ್ಜಿದಾರನು ತನ್ನ ವೇತನ ಮತ್ತು ಭತ್ಯೆಗಳಿಗೆ ಅರ್ಹನಾಗಿದ್ದಾನೆಯೇ? ಅಥವಾ ಇಲ್ಲವೇ? ಯಾವುದಾದರೂ ಇದ್ದಲ್ಲಿ ಎಷ್ಟರ ಮಟ್ಟಿಗೆ ಮತ್ತು ಆ ಅವಧಿಯನ್ನು ಕರ್ತವ್ಯದ ಅವಧಿ ಎಂದು ಪರಿಗಣಿಸಬೇಕೇ ಅಥವಾ ರಜೆ ಅವಧಿ ಎಂದು ಭಾವಿಸಬೇಕೇ? ಎಂಬುದನ್ನು ನಿರ್ಧರಿಸುವಾಗ ಸಕ್ಷಮ ಪ್ರಾಧಿಕಾರವು ಪ್ರಕರಣದ ಸಂದರ್ಭಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಅರ್ಜಿದಾರನನ್ನು ಎಲ್ಲಾ ನಿಂದನೆಗಳಿಂದ ಮುಕ್ತಗೊಳಿಸಲಾಗಿದ್ದಲ್ಲಿ ಮತ್ತು ಸಕ್ಷಮ ಪ್ರಾಧಿಕಾರವು ಅವನ ಅಮಾನತ್ತಿನ ಅವಧಿಯನ್ನು ಕರ್ತವ್ಯದಲ್ಲಿದ್ದುದಾಗಿ ಪರಿಗಣಿಸಿದ್ದಲ್ಲಿ ಮಾತ್ರ, ಅರ್ಜಿದಾರನು ಅಮಾನತ್ತು ಅವಧಿಗಾಗಿ ಪೂರ್ಣವೇತನ ಹಾಗೂ ಭತ್ಯೆಗಳಿಗೆ ಹಕ್ಕುಳ್ಳವನಾಗಿರುತ್ತಾನೆ. ಅರ್ಜಿದಾರನನ್ನು ಅವನ ವಿರುದ್ಧ ಹೊರಿಸಲಾದ ದೋಷಾರೋಪ–IVರ ಎರಡನೇ ಭಾಗದ ತಪ್ಪಿತಸ್ಥನೆಂದು ನಿರ್ಣಯಿಸಲಾಯಿತು ಮತ್ತು ಅನುಬಂಧ–ಎಲ್ ಅನುಸಾರ ದಂಡನೆಯನ್ನು ವಿಧಿಸಲಾಗಿದ್ದು, ಅದು ಪ್ರಶ್ನಿತವಾಗದೆ ಉಳಿದಿದೆ. ಅರ್ಜಿದಾರನನ್ನು ಅವನ ವಿರುದ್ಧ ಹೊರಿಸಲಾದ ಎಲ್ಲಾ ಆರೋಪಗಳಿಂದ ಮುಕ್ತಗೊಳಿಸಿರುವುದಿಲ್ಲ. ಅನುಬಂಧ–ಎಲ್ ಅನುಸಾರ ಮಾರ್ಪಾಡಾದ ದಂಡನೆಯ ದೃಷ್ಟಿಕೋನದಲ್ಲಿ, ಅಮಾನತ್ತು ಅವಧಿಗಾಗಿ ವೇತನ ಮತ್ತು ಭತ್ಯೆಗಳಲ್ಲಿನ ವ್ಯತ್ಯಾಸದ ಮೊತ್ತವನ್ನು ಕ್ಲೇಮು ಮಾಡಲು ಅರ್ಜಿದಾರನು ಯಾವುದೇ ಹಕ್ಕನ್ನು ಹೊಂದಿಲ್ಲ. ಸಕ್ಷಮ ಪ್ರಾಧಿಕಾರವು ಅಂಥ ಆದೇಶವನ್ನು ಹೊರಡಿಸಲು ಸಂಪೂರ್ಣವಾಗಿ ಸಮರ್ಥವಾಗಿದೆ. ಮತ್ತು ಅನುಬಂಧ–ಎನ್ ನಲ್ಲಿರುವಂತೆ ಆದೇಶವು ಯಾವುದೇ ದೃಷ್ಟಿಕೋನದಿಂದ ಸಮಂಜಸವಾಗಿಲ್ಲ ಅಥವಾ ಸ್ವೇಚ್ಛಾನುಸಾರವಾಗಿದೆ ಎಂದು ಹೇಳಲಾಗುವುದಿಲ್ಲ.

ಇದರ ಪರಿಣಾಮವಾಗಿ, ರಿಟ್ ಅರ್ಜಿಯು ಗುಣಾರ್ಹತೆಗಳಿಂದ ಕೂಡಿಲ್ಲದಿರುವುದರಿಂದ, ಜಾರಿಗೊಳಿಸಲಾದ ನಿಯಮವನ್ನು ರದ್ದುಪಡಿಸಲಾಗಿದೆ ಮತ್ತು ವೆಚ್ಚಗಳಿಗೆ ಯಾವುದೇ ಆದೇಶವಿಲ್ಲದೆ ಅರ್ಜಿಯನ್ನು ವಜಾಮಾಡಲಾಗಿದೆ.

———